ಪ್ರಬಂಧ




ಎಸ್.ಆರ್. ವಿಜಯಶಂಕರ

ಕಲೆ: ರೂಪಶ್ರೀ ಕಲ್ಲಿಗನೂರು


# ನಮ್ಮ ಊರಿನಲ್ಲೊಂದು ಕ್ರಿಕೆಟಾಯಣ



ನಮ್ಮ ಊರಿನ ಕ್ರಿಕೆಟ್ ಜಮಖಾನದಲ್ಲಿ ವಾರ್ಷಿಕ ಟೂರ್ನಮೆಂಟ್ ನಡೆಯುತ್ತದೆ. ಸೌರಮಾನ ಪಂಚಾಂಗದ ವಿಷು ಹಬ್ಬದ ದಿನ ಟ್ರೋಫಿ ಅಲಿಯಾಸ್ ಪ್ರೈಸ್ ವಿತರಣೆ. ಅದನ್ನೇನೊ ಆಟವಾಡುವ ಹುಡುಗರು ಟೂರ್ನಮೆಂಟ್ ಎಂದರೂ ತುಸು ವಯಸ್ಸಾದ ಹಳೆ ವಿದ್ಯಾರ್ಥಿಗಳಿಗೆ ಅದೊಂದು ಕ್ರಿಕೆಟ್ ಮ್ಯಾಚ್. ಇನ್ನೂ ವಯಸ್ಸಾದ ಊರ ಹಿರಿಯರಿಗೆ ಅದು ಹಬ್ಬದ ಆಟ ಅಥವಾ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿ. ಊರ ತರುಣರು, ಹುಡುಗರು ಸೇರಿ ಬೆಳೆ ಕೊಯಿಲಾಗಿರುವ, ಸಮತಟ್ಟಾದ ಹೊಲವೊಂದನ್ನು ಸಫಾಯಿ ಮಾಡಿ ಗ್ರೌಂಡ್ ಮಾಡುತ್ತಾರೆ. ಅಲ್ಲಿ ಮಕ್ಕಳ ತಂಡಗಳ ನಡುವೆ ನಡೆಯುವ ಟೆನಿಸ್ ಬಾಲ್ ಕ್ರಿಕೆಟ್ ಆಟವೇ ಈ ಪಂದ್ಯಾವಳಿ. ಹುಡುಗರು ಆಟವಾಡುತ್ತಿದ್ದರೆ, ಬಿಡುವಿರುವ ನಾಲ್ಕಾರು ಜನ ಮರದ ನೆರಳಲ್ಲಿ ಕುಳಿತು ಆಟ ನೋಡತೊಡಗಿದರೆ ಮ್ಯಾಚ್ ಪ್ರಾರಂಭವಾಯಿತು ಎಂದು ಊರ ಜನಕ್ಕೆ ತಿಳಿಯುತ್ತದೆ.

ಆ ಕ್ರಿಕೆಟ್ ಆಟಗಳಲ್ಲಿ ದೊಡ್ಡ ಜಗಳವಾಗುವ ಕ್ರಮ ಇಲ್ಲ. ನಡೆಯುವ ಜಗಳಗಳೆಲ್ಲಾ ಸಣ್ಣಪುಟ್ಟದು. ಔಟ್ ಅಥವಾ ನಾಟ್‌ಔಟ್ ಎಂಬುದೇ ಮುಖ್ಯ ಜಗಳ. ಕ್ಯಾಚ್ ಹಿಡಿದೆ – ಅದು ಕ್ಯಾಚ್ ಅಲ್ಲ ಎಂಬುದು ಇನ್ನೊಂದು ಜಗಳ.